3.00 P.M.

ANNOUNCEMENT

MR. SPEAKER.—Now there is an announcement. I have nominated Smt. Shakuntala Chougule to the panel of chairman in the vacancy caused consequent on the appointment of Dr. Pushpavati as Minister.

ಶ್ರೀ ಎಂ. ಎಸ್. ಕೃಷ್ಣನ್.—ಬೆಳಿಗ್ಗೆ ಮಾತನಾಡುತ್ತಿದ್ದಾಗ ಮಧ್ಯಾಹ್ನ ಆಟೋರಿಕ್ಷಾ ಸ್ಟ್ರೈಕ್ ಬಗ್ಗೆ ಮಾನ್ಯ ಸಾರಿಗೆ ಮಂತ್ರಿಗಳಿಂದ ಸ್ಟೇಟ್‌ಮೆಂಟ್ ಕೊಡಿಸಲಾಗುವುದು ಎಂಬುದಾಗಿ ಹೇಳಿದ್ದೀರಿ. ಈಗ ಸಾರಿಗೆ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೂ ಇದ್ದಾರೆ. ಆ ಬಗ್ಗೆ ಅವರು ಹೇಳಿಕೆಯನ್ನು ಕೊಡಬೇಕು. ಅವರ ಸಮಸ್ಯೆ ಏನು ಇದೆ, ಅದನ್ನು ಇತ್ಯರ್ಥ ಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಮುಷ್ಕರ ನಿಲ್ಲಿಸಬೇಕಾದರೆ ಸ್ಟೇಟ್‌ಮೆಂಟ್‌ನ್ನು ಕೊಡಬೇಕು.

ಸಚಿವರ ಹೇಳಿಕೆ

ಬೆಂಗಳೂರಿನಲ್ಲಿ ಆಟೋರಿಕ್ಷಾ ದರವನ್ನು ಪರಿಷ್ಕರಿಸುವ ಬಗ್ಗೆ

ಶ್ರೀ ಸಿದ್ದರಾಮಯ್ಯ:— ನಿನ್ನೆ ಕೂಡ ಪಿಳಿಕರ ಕೆಳಿಗೆ ಸರ್ಕಾರದ ಗಮನವನ್ನು ಮಾನ್ಯ ಸದಸ್ಯರು ಸೆಳೆದಿದ್ದರೂ ಆಗಲೂ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದೆ. ಈಗಲೂ ಆ ಬಗ್ಗೆ ಸ್ಟೇಟ್‌ಮೆಂಟನ್ನು ಮಾಡುತ್ತೇನೆ.

ಆಟೋರಿಕ್ಷಾಗಳ ಪ್ರಯಾಣದರ ಮತ್ತು ಸರಕು ಸಾಗಾಣಿ ದರವನ್ನು ಕಳೆದ ಬಾರಿ ೨೬–೩–೮೫ ರಿಂದ ಸರ್ಕಾರಿ ಆದೇಶ ಕ್ರಮಾಂಕ ಎಫ್ ಟಿ ಡಿ ೫೬ ಟಿ ಟಿ ಎಂ ಎ ೮೫ ರಂತೆ ಪರಿಷ್ಕರಣೆ ಮಾಡಲಾಗಿತ್ತು. ೧೯೮೮ರಲ್ಲಿ ಪೆಟ್ರೋಲ್ ಹಾಗೂ ಆಯಿಲ್ ದರಗಳ ಹೆಚ್ಚಳದಿಂದಾಗಿ ಆಟೋ ರಿಕ್ಷಾಗಳ ನಿರ್ವಹಣಾ ವೆಚ್ಚದಲ್ಲಿ ಪ್ರತಿ ಕಿ. ಮೀ. ಗೆ ೭ ಪೈಸೆಗಳಷ್ಟು ಹೆಚ್ಚಾಗಿದೆ ಎಂಬುದಾಗಿ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಆಟೋರಿಕ್ಷಾಗಳ ಚಾಲಕರಿಂದ ಹಾಗೂ ಮಾಲೀಕರಿಂದ ದರ ಪರಿಷ್ಕರಿಸುವ ಬಗ್ಗೆ ಮನವಿಗಳು ಬಂದಿದ್ದಲ್ಲದೆ ಪ್ರಯಾಣಿಕರಿಂದಲೂ ಸಹ ಆಟೋರಿಕ್ಷಾದವರು ಹೆಚ್ಚಿನ ದರಗಳನ್ನು ವಸೂಲು ಮಾಡುತ್ತಿದ್ದಾರೆಂದು ದೂರುಗಳು ಬಂದಿದ್ದವು. ಇವೆಲ್ಲವನ್ನು ಪರಿಗಣನೆಗೆ ತೆಗೆದುಕೊಂಡು ಸರ್ಕಾರವು ಮೋಟಾರು ವಾಹನ ಕಾಯಿದೆಯ ವಿಧಿಯ ಅನ್ವಯ ದರ ಪರಿಷ್ಕರಣೆ ಮಾಡಲು ಬಾಕಿ ಇದ್ದಂತೆ ರಾಜ್ಯ ಸಾರಿಗೆ ಪ್ರಾಧಿಕಾರವು ಎಲ್ಲಾ ಆಟೋರಿಕ್ಷಾಗಳ ಯೂನಿಯನ್‌ಗಳಿಗೆ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಚನೆ ನೀಡಿ ಪ್ರತಿ ಕಿ. ಮೀ. ಗೆ ೭ ಪೈಸೆಯನ್ನು ತಾತ್ಕಾಲಿಕವಾಗಿ ಹೆಚ್ಚಾಗಿ ವಸೂಲು ಮಾಡಲು ಅನುಮತಿ ನೀಡಿದೆ. ಆಟೋರಿಕ್ಷಾ ಚಾಲಕರ, ಮಾಲೀಕರ ಹಾಗೂ ಸಾರ್ವಜನಿಕರ ಮನವಿಗಳನ್ನು ಸರ್ಕಾರವು ಗಣನೆಗೆ ತೆಗೆದುಕೊಂಡು ಆಟೋ ದರವನ್ನು ಪರಿಷ್ಕರಿಸಲು ಕರಡು ಅಧಿಸೂಚನೆಯನ್ನು ದಿನಾಂಕ ೩೦–೭–೮೮ ರಂದು ಎಫ್‌ಟಿಡಿ ೧೦೫ ಟಿಟಿಎಂಎ ೮೮ರ ಅಧಿಸೂಚನೆ ಪ್ರಕಾರ ರಾಜ್ಯ ಪತ್ರದಲ್ಲಿ ಪ್ರಕಟಣೆ ಮಾಡಿ, ಇದಕ್ಕೆ ಸಂಬಂಧಪಟ್ಟವರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿತು. ಈ ಕರಡು ಅಧಿಸೂಚನೆಗೆ ಅನುಗುಣವಾಗಿ ಆಟೋರಿಕ್ಷಾ ಚಾಲಕರು, ಮಾಲೀಕರು ಹಾಗೂ ಪ್ರಯಾಣಿಕರು ನೀಡಿದ ಲಿಖಿತ ಆಕ್ಷೇಪಣೆಗಳನ್ನು ಪರಿಶೀಲಿಸಿ ದಿನಾಂಕ ೧೪–೧೧–೮೮ ಹಾಗೂ ೨೯–೧೨–೮೮ರಂದು ಸರ್ಕಾರವು ಎಲ್ಲರ ಅಹವಾಲುಗಳನ್ನು ಕೇಳಿದೆ. ಇದಲ್ಲದೆ ನೆರೆರಾಜ್ಯಗಳಲ್ಲಿರುವ ಆಟೋದರ ವಿವರಗಳನ್ನು ಸಹ ತರಿಸಿಕೊಂಡು ಪರಿಶೀಲಿಸಿತು. ಆಟೋರಿಕ್ಷಾ ಚಾಲಕರ/ಮಾಲೀಕರ ಸಾರ್ವಜನಿಕ ಪ್ರಯಾಣಿಕ ಸಂಘ–ಸಂಸ್ಥೆಗಳ ಎಲ್ಲಾ ಮನವಿಗಳನ್ನು ಸರ್ಕಾರ ಪರಿಶೀಲನೆ ಮಾಡಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವ ಘಟ್ಟದಲ್ಲಿದೆ. ಮೋಟಾರು ವಾಹನ ಕಾಯಿದೆಯ ವಿಧಿಗಳನ್ನು ಅನುಸರಿಸಬೇಕಾಗಿರುವುದರಿಂದ ಅವುಗಳನ್ನು ಅನುಸರಿಸಿ ಹೊಸ ಪರಿಷ್ಕೃತ ದರಗಳನ್ನು ೧–೪–೮೯ ರಿಂದ ಜಾರಿಗೆ ತರಲು ಅವಶ್ಯ ವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಗಳು ಹೇಳಿರುವ ರೀತಿಯನ್ನು ನೋಡಿದರೆ ೧–೪–೮೯ ರಿಂದ ಜಾರಿಗೆ ತೆಗೆದುಕೊಂಡಂತೆ ಬರುತ್ತೇವೆಂದು ಹೇಳಿದ್ದಾರೆ. ಆ ಪ್ರಶ್ನೆಯನ್ನು ಯಾವ ರೀತಿಯಲ್ಲಿ